**All India Radio: Bangalore**
**National Bulletin In Kannada**
**16.07.2026  07.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**16.07.2026  07.35 a.m.**
**<><><><>**

ಮುಖ್ಯಾಂಶಗಳು

1. ಪ್ರಧಾನಿ ನರೇಂದ್ರ ಮೋದಿ ನಾಳೆ ಹರಿಯಾಣ ಭೇಟಿ ; ದೇಶದ ಮೊದಲ ಹೈಡ್ರೋಜನ್ ರೈಲಿಗೆ ಚಾಲನೆ
2. ಹಲವು ವಲಯಗಳಲ್ಲಿ ಸಹಕಾರ ಸಂಬಂಧ ವಿಸ್ತರಣೆಗೆ ಭಾರತ-ಬೆಲ್ಜಿಯಂ ಒಪ್ಪಿಗೆ
3. ಭಾರತ-ಯುಕೆ ವ್ಯಾಪಾರ ಒಪ್ಪಂದ ಜಾರಿ ; ಮೊದಲ ದಿನವೇ ೧೪೦ ಮಿಲಿಯನ್ ಮೌಲ್ಯದ ವಸ್ತುಗಳ ರಫ್ತು
4. ರೈಲ್ವೆ ಬುಕ್ಕಿಂಗ್ ಇನ್ನು ಸರಳ, ಸುಲಭ-ಐಆರ್‌ಸಿಟಿಸಿ ಯಿಂದ ಹೊಸ ಬೀಟಾ ಆವೃತ್ತಿ ಆರಂಭ
5. ಫಿಫಾ ವಿಶ್ವಕಪ್ ಫುಟ್ಬಾಲ್ ; ಇಂಗ್ಲೆಂಡ್ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸಿದ ಹಾಲಿ ಚಾಂಪಿಯನ್ ಅರ್ಜೆಂಟೀನಾ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಹರಿಯಾಣ, ಚಂಡೀಗಢ ಮತ್ತು ಪಂಜಾಬ್‌ಗೆ ಭೇಟಿ ನೀಡಲಿದ್ದಾರೆ. ಹರಿಯಾಣದ ಜಿಂದ್ ರೈಲು ನಿಲ್ದಾಣದಲ್ಲಿ ಜಿಂದ್ ಮತ್ತು ಸೋನಿಪತ್ ನಡುವಿನ ಭಾರತದ ಮೊದಲ ಹೈಡ್ರೋಜನ್ ರೈಲಿಗೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ಜಿಂದ್‌ನ ಏಕಲವ್ಯ ಕ್ರೀಡಾಂಗಣದಲ್ಲಿ ಸುಮಾರು ೧೪ ಸಾವಿರದ ೭೦೦ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಪ್ರಧಾನಿ ಅವರು ಮಧ್ಯಾಹ್ನ ಚಂಡೀಗಢಕ್ಕೆ ಭೇಟಿ ನೀಡಲಿದ್ದು, ಅಲ್ಲಿ ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ರಸ್ತೆ ಮೂಲಸೌಕರ್ಯ ಸೇರಿದಂತೆ ಆರು ಸಾವಿರದ ೬೦೦ ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಚಂಡೀಗಢದ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಯಲ್ಲಿ ಆಧುನಿಕ ಮಾತೃ ಮತ್ತು ಮಕ್ಕಳ ಕೇಂದ್ರ ಹಾಗೂ ಅತ್ಯಾಧುನಿಕ ನರವಿಜ್ಞಾನ ಕೇಂದ್ರವನ್ನು ಪ್ರಧಾನಿ ಉದ್ಘಾಟಿಸುವರು. ನಂತರ ಪ್ರಧಾನಿ ಅವರು ಜಲಂಧರ್‌ಗೆ ಭೇಟಿ ನೀಡಲಿದ್ದು, ಸಂಪರ್ಕ ಬಲವರ್ಧನೆ ಮತ್ತು ಆರ್ಥಿಕ ಅಭಿವೃದ್ಧಿ ವೇಗಗೊಳಿಸುವ ಗುರಿ ಹೊಂದಿರುವ ಐದು ಸಾವಿರದ ೪೭೦ ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಇದೇ ವೇಳೆ ಅವರು ಅಮೃತ ಭಾರತ ನಿಲ್ದಾಣ ಯೋಜನೆಯಡಿ ಜಲಂಧರ್ ಕಂಟೋನ್ಮೆಂಟ್ ಸೇರಿ ೭೫ ಪುನರಾಭಿವೃದ್ಧಿಗೊಂಡ ರೈಲು ನಿಲ್ದಾಣಗಳನ್ನು ಲೋಕಾರ್ಪಣೆ ಮಾಡುವರು.

<><><><>

ವ್ಯಾಪಾರ ಮತ್ತು ಹೂಡಿಕೆ, ಹಸಿರು ಇಂಧನ ಪರಿವರ್ತನೆ, ನಾವೀನ್ಯತೆ ಮತ್ತು ತಂತ್ರಜ್ಞಾನ, ಸಂಪರ್ಕ, ರಕ್ಷಣೆ, ಭದ್ರತೆ, ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳು ಹಾಗೂ ಜನರ ವಿನಿಮಯ ಸೇರಿ ಹಲವು ಕ್ಷೇತ್ರಗಳಲ್ಲಿ ಸಹಕಾರ ಸಂಬಂಧವನ್ನು ಮತ್ತಷ್ಟು ವೃದ್ಧಿಸಲು ಭಾರತ ಮತ್ತು ಬೆಲ್ಜಿಯಂ ಒಪ್ಪಿಕೊಂಡಿವೆ. ಹೆಚ್ಚು ರಚನಾತ್ಮಕ

ಮತ್ತು ಸಮಗ್ರ ಪಾಲುದಾರಿಕೆಯ ಮೂಲಕ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವತ್ತ ಮಹತ್ವದ ಹೆಜ್ಜೆಯನ್ನಿಡುವ ಭಾರತ-ಬೆಲ್ಜಿಯಂ ಕಾರ್ಯತಂತ್ರದ ಸಂವಾದದ ಮೊದಲ ಸಭೆ ನಿನ್ನೆ ಬ್ರಸೆಲ್ಸ್‌ನಲ್ಲಿ ನಡೆಯಿತು. ಕಾರ್ಯತಂತ್ರದ ಸಂವಾದದ ಉದ್ಘಾಟನಾ ಗೋಷ್ಠಿಯಲ್ಲಿ ಸಹ ಅಧ್ಯಕ್ಷತೆಯನ್ನು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮತ್ತು ಬೆಲ್ಜಿಯಂನ ಉಪ ಪ್ರಧಾನಿ ಮತ್ತು ವಿದೇಶಾಂಗ ವ್ಯವಹಾರ ಹಾಗೂ ಅಭಿವೃದ್ಧಿ ಸಹಕಾರ ಸಚಿವ ಮ್ಯಾಕ್ಸಿಮ್ ಪ್ರೆವೋಟ್ ಅವರು ವಹಿಸಿದ್ದರು. ಡಾ. ಜೈಶಂಕರ್ ಅವರು, ಯುರೋಪ್ ಜೊತೆಗಿನ ಭಾರತದ ಒಳಗೊಳ್ಳುವಿಕೆಯಲ್ಲಿ ಬೆಲ್ಜಿಯಂ ವಿಶೇಷ ಸ್ಥಾನವನ್ನು ಹೊಂದಿದೆ. ದ್ವಿಪಕ್ಷೀಯ ಪಾಲುದಾರಿಕೆ ಆಳವಾಗಿ ಬೆಳೆಯುತ್ತಿರುವಂತೆಯೇ ಭಾರತ-ಐರೋಪ್ಯ ಒಕ್ಕೂಟದ ಸಂಬಂಧವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂದರು.

**ಧ್ವನಿ: ಡಾ. ಜೈಶಂಕರ್ ( ೨೮ ಸೆಕೆಂಡ್ ಗಳು)**

ವ್ಯಾಪಾರ, ಹೂಡಿಕೆ ಮತ್ತು ನಾವೀನ್ಯತೆ ಎರಡೂ ದೇಶಗಳನ್ನು ಹತ್ತಿರಕ್ಕೆ ತರುತ್ತದೆ ಮತ್ತು ಭವಿಷ್ಯದ ಸಹಕಾರಕ್ಕೆ ಭದ್ರ ಬುನಾದಿಯನ್ನು ಒದಗಿಸುತ್ತದೆ ಎಂದು ಪ್ರೆವೋಟ್ ಹೇಳಿದರು.

<><><>

ಭಾರತ ಮತ್ತು ಯುಕೆ ನಡುವಿನ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ ಜಾರಿಯಾದ ಮೊದಲ ದಿನವಾದ ನಿನ್ನೆ ಸುಮಾರು ೧೪೦ ಮಿಲಿಯನ್ ಮೌಲ್ಯದ ವಸ್ತುಗಳನ್ನು ರಫ್ತು ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಹೇಳಿದ್ದಾರೆ. ದೆಹಲಿಯಲ್ಲಿ ನಿನ್ನೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಇಟಿಎ ಒಪ್ಪಂದ ಉಭಯ ದೇಶಗಳಿಗೂ ಅಗಾಧ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಇದು ಮುಂಬರುವ ದಿನಗಳಲ್ಲಿ ಕೇವಲ ವ್ಯಾಪಾರ ವಲಯಕ್ಕೆ ಮಾತ್ರವಲ್ಲ, ಸೇವಾವಲಯಕ್ಕೂ ಕೂಡ ದೊಡ್ಡ ಪ್ರಮಾಣದ ಉತ್ತೇಜನವನ್ನು ನೀಡಲಿದೆ ಎಂದು ತಿಳಿಸಿದ್ದಾರೆ.

<><><>

ರೈಲ್ವೆ ಸಚಿವಾಲಯವು,ಭಾರತೀಯ ರೈಲ್ವೆ ಅಡುಗೆ ಮತ್ತು ಪ್ರವಾಸೋದ್ಯಮ ನಿಗಮದ ಐಆರ್‌ಸಿಟಿಸಿ ವೆಬ್‌ಸೈಟ್‌ನ ಹೊಸ ಬೀಟಾ ಆವೃತ್ತಿಯನ್ನು ಆರಂಭಿಸಿದೆ, ಇದು ರೈಲು ಟಿಕೆಟ್ ಬುಕಿಂಗ್ ಅನ್ನು ಹೆಚ್ಚು ಸರಳ ಮತ್ತು ಬಳಕೆದಾರ ಸ್ನೇಹಿಯನ್ನಾಗಿ ಮಾಡುತ್ತದೆ. ಹೊಸ ಆವೃತ್ತಿಯಲ್ಲಿ ನಾಲ್ಕು ಪ್ರಮುಖ ಸುಧಾರಣೆ ಮಾಡಲಾಗಿದೆ. ಮೊದಲನೆಯದಾಗಿ, ಇದು ಅನಗತ್ಯ ಕ್ಯಾಪ್ಚಾಗಳು, ಪಾಪ್-ಅಪ್‌ಗಳು, ಗ್ರಾಫಿಕ್ಸ್ ಅಥವಾ ಗಮನ ಬೇರೆಡೆ ಸೆಳೆಯುವ ಅಂಶಗಳನ್ನು ಹೊಂದಿಲ್ಲ. ಎರಡನೆಯದಾಗಿ, ಪ್ರಯಾಣಿಕರು ಎಲ್ಲಾ ವರ್ಗಗಳಲ್ಲಿ ಸೀಟುಗಳ ಲಭ್ಯತೆ ವೀಕ್ಷಿಸಬಹುದು. ಮೂರನೆಯದಾಗಿ, ಇದು ವೇಗವಾದ ಚೆಕ್‌ಔಟ್ ಪ್ರಕ್ರಿಯೆ ಒದಗಿಸುತ್ತದೆ, ಟಿಕೆಟ್‌ಗಳನ್ನು ಬುಕ್ ಮಾಡಲು ಅಗತ್ಯವಿರುವ ಹಂತಗಳ ಸಂಖ್ಯೆಯನ್ನು ಗಮನಾರ್ಹವಾಗಿ ತಗ್ಗಿಸುತ್ತದೆ ಮತ್ತು ಕೊನೆಯದಾಗಿ ವೆಬ್‌ಸೈಟ್ ಈಗ ಪ್ರಯಾಣಿಕರ ವಿವರಗಳನ್ನು ಉಳಿಸುತ್ತದೆ, ಪುನರಾವರ್ತಿತ ಬುಕಿಂಗ್‌ಗಳನ್ನು ಸುಲಭಗೊಳಿಸುತ್ತದೆ.

ವೆಬ್‌ಸೈಟ್ ವಿಳಾಸ www.irctc.co.in/eticket/. ಬೀಟಾ ಆವೃತ್ತಿಯ ಲಿಂಕ್ ಅನ್ನು ಹಾಲಿ ಇರುವ ವೆಬ್‌ಸೈಟ್‌ನ ಮುಖಪುಟದಲ್ಲಿಯೂ ಒದಗಿಸಲಾಗಿದೆ.

<><><>

ಭಾರತದ ಸೆಮಿಕಂಡಕ್ಟರ್ ವಿನ್ಯಾಸ ಮತ್ತು ಉತ್ಪಾದನಾ ಪರಿಸರ ವ್ಯವಸ್ಥೆಯ ಅಭಿವೃದ್ಧಿಗಾಗಿ ೧ ಲಕ್ಷದ ೨೭ ಸಾವಿರದ ೫೦೦ ಕೋಟಿ ರೂಪಾಯಿಗಳ ಬಜೆಟ್ ವೆಚ್ಚದೊಂದಿಗೆ ಸೆಮಿಕಾನ್ ೨.೦ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು, ಸೆಮಿಕಾನ್ ೧.೦ ರ ವೇಗವನ್ನು ಆಧರಿಸಿ, ಭಾರತವನ್ನು ಜಾಗತಿಕ ಸೆಮಿಕಂಡಕ್ಟರ್ ವಲಯದಲ್ಲಿ ಮುಮಚೂಣಿಯಲ್ಲಿರುವ ಸರ್ಕಾರದ ಬದ್ಧತೆಯ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ಹೇಳಿದರು. ಈ ಯೋಜನೆಯು ಆರ್ಥಿಕ ಬೆಳವಣಿಗೆಯನ್ನು ಬೆಂಬಲಿಸುತ್ತದೆ, ಪೂರೈಕೆ ಸರಣಿ ಸ್ಥಿತಿಸ್ಥಾಪಕತ್ವ ಬಲಪಡಿಸುತ್ತದೆ ಮತ್ತು ನಿರ್ಣಾಯಕ ವಲಯಗಳಲ್ಲಿ ತಾಂತ್ರಿಕ ನಾಯಕತ್ವವನ್ನು ಸ್ಥಾಪಿಸುತ್ತದೆ. ಸೆಮಿಕಾನ್ ೨.೦ ಆರು ಸ್ತಂಭಗಳ ಮೂಲಕ ಸೆಮಿಕಂಡಕ್ಟರ್ ಪೂರಕ ವ್ಯವಸ್ಥೆಯನ್ನು ಸಮಗ್ರವಾಗಿ ನಿರ್ಮಿಸಲು ಪ್ರಯತ್ನಿಸುತ್ತದೆ - ಅವುಗಳೆಂದರೆ ವಿನ್ಯಾಸ, ಯಂತ್ರಗಳು ಮತ್ತು ಸಾಮಗ್ರಿಗಳು, ಹೆಚ್ಚಿನ ಫ್ಯಾಬ್‌ಗಳನ್ನು ಸ್ಥಾಪಿಸುವುದು, ATMP-OSAT ಉದ್ಯಮ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಎಂದು ಸಚಿವರು ಹೇಳಿದರು.

ಧ್ವನಿ: ಅಶ್ವಿನಿ ವಷ್ಣವ್ ( ೨೪ ಸೆಕೆಂಡ್ ಗಳು)

<><><>

ಸ್ಟಾರ್ಟ್‌ಅಪ್, ಕೌಶಾಲ್ಯಭಿವೃದ್ಧಿ ಮತ್ತು ಅಗ್ರಿಟೆಕ್‌ಗಳ ಮೂಲಕ ಕೃಷಿ ವಲಯವನ್ನು ಬಲವರ್ಧನೆಗೊಳಿಸಲು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ -ಸಿಎಸ್‌ಆರ್ ನೆರವು ಪಡೆದುಕೊಳ್ಳುವ ಅಗತ್ಯವಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಅವರು, ದೆಹಲಿಯಲ್ಲಿ ನಿನ್ನೆ ಐಸಿಆರ್ ಆಯೋಜಿಸಿದ ಸಿಎಸ್‌ಆರ್ ಕುರಿತ ಸಮಾವೇಶ ಉದ್ದೇಶಿಸಿ ಮಾತನಾಡಿ, ಕಾರ್ಪೋರೇಟ್ ವಲಯವು ಕೂಡ ರೈತ ಕಲ್ಯಾಣ, ಕೃಷಿ ಸಂಶೋಧನೆ ಮತ್ತು ಗ್ರಾಮೀಣಾ ಸಮುದಾಯಗಳ ಅಭಿವೃದ್ಧಿಗೆ ತಮ್ಮ ಗಳಿಕೆಯ ಅಲ್ಪ ಭಾಗವನ್ನು ವಿನಿಯೋಗಿಸುವ ಮೂಲಕ ಸಾಮಾಜಿಕ ಹೊಣೆಗಾರಿಕೆಯನ್ನು ಪ್ರದರ್ಶಿಸಬೇಕು ಎಂದು ಕರೆ ನೀಡಿದರು.

<><><>

ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವದ ಮೇಲಿನ ನಂಬಿಕೆಯನ್ನು ಪುನರುಚ್ಚರಿಸುತ್ತಿದ್ದು, ಪ್ರಾಮಾಣಿಕತೆ ಮತ್ತು ಬದ್ಧತೆಯ ಸೇವೆ ಸಲ್ಲಿಸುವ ಮೂಲಕ ಆ ನಂಬಿಕೆ ಎತ್ತಿಹಿಡಿಯಬೇಕಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಚುನಾಯಿತ ಪ್ರತಿನಿಧಿಗಳಿಗೆ ಕರೆ ನೀಡಿದ್ದಾರೆ.

<><><>

ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಹಾಲಿ ಚಾಂಪಿಯನ್ಸ್ ಅರ್ಜೆಂಟೀನಾ ಇಂಗ್ಲೆಂಡ್ ಅನ್ನು ೨-೧ ಗೋಲುಗಳಿಂದ ಮಣಿಸಿ ಫೈನಲ್ ಪ್ರವೇಶಿಸಿದೆ. ಕಳೆದ ಮಧ್ಯರಾತ್ರಿ ಅಟ್ಲಾಂಟಾ ಕ್ರೀಡಾಂಗಣದಲ್ಲಿ ನಡೆದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಮೊದಲಾರ್ಧವು ಗೋಲುರಹಿತವಾಗಿ ಕೊನೆಗೊಂಡಿತು, ಆದರೆ

ದ್ವಿತಿಯಾರ್ಧದಲ್ಲಿ ಆಂಥೋನಿ ಗಾರ್ಡನ್ ೫೫ನೇ ನಿಮಿಷದಲ್ಲಿ ಇಂಗ್ಲೆಂಡ್ ಪರ ಮೊದಲ ಗೋಲು ಗಳಿಸಿದರು. ಅರ್ಜೆಂಟೀನಾದ ಎಂಜೊ ಫೆರ್ನಾಂಡಿಸ್ ೮೫ ನೇ ನಿಮಿಷದಲ್ಲಿ ಮತ್ತು ಲೌಟಾರೊ ಮಾರ್ಟಿನೆಜ್ ೯೦ ನೇ ನಿಮಿಷದಲ್ಲಿ ಗೋಲು ಗಳಿಸಿ ಅರ್ಜೆಂಟೀನಾಗೆ ೨-೧ ಅಂತರದ ರೋಚಕ ಗೆಲುವು ತಂದುಕೊಟ್ಟರು. ಇದೀಗ ಅರ್ಜೆಂಟೀನಾ ಇದೇ ಭಾನುವಾರ ನಡೆಯುವ ಫೈನಲ್‌ನಲ್ಲಿ ಸ್ಪೇನ್ ವಿರುದ್ಧ ಪ್ರಶಸ್ತಿಗಾಗಿ ಸೆಣೆಸಲಿದೆ. ಅರ್ಜೆಂಟೀನಾ ೨೦೨೨ ರಲ್ಲಿ ಕತಾರ್‌ನಲ್ಲಿ ನಡೆದ ವಿಶ್ವಕಪ್ ಪ್ರಶಸ್ತಿಯನ್ನು ಗೆದ್ದುಕೊಂಡಿತ್ತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>